ಹೆದರುವವಳಲ್ಲ. ತಪ್ಪು ಕಾಣಿಸಿದಲ್ಲಿ, ಅನ್ಯಾಯ ನಡೆದಲ್ಲಿ ಮುಖಕ್ಕೆ ಹೊಡೆದ ಹಾಗೆ ಹೇಳುವ ಛಾತಿ ಇರುವವಳು. ಫಿಲ್ಟರ್ ಇಟ್ಟುಕೊಂಡು ಮಾತಾಡುವುದು ಅವಳಿಗೆ ಗೊತ್ತಿಲ್ಲ. ನನ್ನ ಸ್ವಭಾವ ಇದಕ್ಕೆ ಪೂರ್ತಿ ವಿರುದ್ಧ. ನಾನು ನಾಚಿಕೆ ಸ್ವಭಾವದವಳು. ಜಾಸ್ತಿ ಮಾತಾಡುವವಳಲ್ಲ. ಹಾಗಾಗಿಯೇ ಈ ಪಾತ್ರ ನನಗೆ ಚಾಲೆಂಜಿಂಗ್ ಅನಿಸಿದ್ದು. ಹೀಗೆ ನನ್ನ ಹಾಗಿಲ್ಲದ ಪಾತ್ರಕ್ಕೆ ಜೀವ ತುಂಬುವುದರಲ್ಲಿಯೇ ನಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಲು ಸಾಧ್ಯವಾಗುವುದು ಎಂದು ಅನಿಸಿ ಖುಷಿಯಿಂದ ಈ ಪಾತ್ರದ ಸಿದ್ಧತೆಯಲ್ಲಿ ತೊಡಗಿಕೊಂಡೆ' ಎಂದು ಸಿನಿಮಾಗೆ ಆಯ್ಕೆಯಾದ ಕುರಿತು ವಿವರಿಸುತ್ತಾರೆ ಅದ್ವಿಕಾ.

ಈ ಸಿನಿಮಾ ಪಾತ್ರದ ಸಿದ್ಧತೆಗಾಗಿ ಅವರು ತಂಡದ ಜೊತೆಗೆ ಒಂದು ತಿಂಗಳ ಕಾಲ ವರ್ಕ್‌ಷಾಪ್ ಮಾಡಿದ್ದಾರೆ. ಆ ಪಾತ್ರ ಹೇಗೆ ವರ್ತಿಸುತ್ತದೆ, ಹೇಗೆ ಮಾತಾಡುತ್ತದೆ ಎಂಬುದನ್ನೆಲ್ಲ ತಮಗೆ ತಾವೇ ಸ್ಪಷ್ಟಪಡಿಸಿಕೊಂಡಿದ್ದಾರೆ. ಹಾಗಾಗಿಯೇ ಮೊದಲ ದಿನದ ಶೂಟಿಂಗ್ ಅವರಿಗೆ ಕಷ್ಟ ಎಂದೇನೂ ಅನಿಸಲೇ ಇಲ್ಲ.

'ಮೊದಲ ದಿನ ಶೂಟಿಂಗ್ ಹೋಗುವ ಹೊತ್ತಿಗೆ ನಾನಾಗಲೇ ತಂಡದ ಜೊತೆ ಸಾಕಷ್ಟು ಒಡನಾಡಿದ್ದೆ. ಇದು ನನ್ನ ಕಂಫರ್ಟ್ ಜೋನ್ ಎಂದು ಅನಿಸುವ ಹಾಗಾಗಿತ್ತು. ಹಾಗಾಗಿ ಕ್ಯಾಮೆರಾ ಎದುರು ಅಭಿನಯಿಸುವುದು ಅಷ್ಟೇನೂ ಕಷ್ಟ ಅನಿಸಲಿಲ್ಲ. ಅಲ್ಲದೆ ಇಡೀ ತಂಡ ನಾನು ತಪ್ಪು ಮಾಡಿದಾಗೆಲ್ಲ ತಾಳ್ಮೆಯಿಂದ ಪ್ರೀತಿಯಿಂದ ತಿದ್ದಿ ಸಹಕರಿಸಿತು' ಎಂದು ಕೃತಜ್ಞತೆಯಿಂದ ಅವರು ನೆನಪಿಸಿಕೊಳ್ಳುತ್ತಾರೆ.

ರಂಗಭೂಮಿಯಿಂದ ಬಂದು ಸಿನಿರಂಗದಲ್ಲಿ ಮಿಂಚಲು ಸಜ್ಜಾಗಿರುವ ಅವರಿಗೆ ಈ ಎರಡೂ ಕ್ಷೇತ್ರಗಳ ಮೇಲೂ ಅಷ್ಟೇ ಮಮಕಾರವಿದೆ. 'ರಂಗಭೂಮಿ ಅದರದೇ ಕಾರಣಗಳಿಂದ ನನಗೆ ತುಂಬ ಇಷ್ಟ. ಹಾಗೆಯೇ ಸಿನಿಮಾ ಕೂಡ. ಎರಡರಲ್ಲಿ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವುದು ನನಗೆ ಸಾಧ್ಯವಿಲ್ಲ. ಎರಡೂ ನನಗೆ ಖುಷಿ ತೃಪ್ತಿಗಳನ್ನು ಕೊಡುವ ಕ್ಷೇತ್ರಗಳು' ಎನ್ನುವುದು ಅವರ ಅಂಬೋಣ.

ಆಲ್‌ಓಕೆ ಜೊತೆಗೆ 'ಹೌಸ್ ಪಾರ್ಟಿ' ಎಂಬ ಒಂದು ಆಲ್ಬಂ ಸಾಂಗ್ ಕೂಡ ಅವರು ಮಾಡಿದ್ದಾರೆ. ಆ ಇಡೀ ಸಾಂಗ್ ಗೋಕರ್ಣದಲ್ಲಿ ಚಿತ್ರೀಕರಿಸಲಾಗಿದೆಯಂತೆ.

'ನಂಗೆ ಒಳ್ಳೆಯ ಕಾನ್ಸೆಪ್ಟ್ ಇರುವ ಗಟ್ಟಿಯಾದ ಸ್ಕ್ರಿಪ್ಟ್ ಬೇಕು' ಎನ್ನುವ ಅದ್ವಿಕಾ, ಮಹಿಳಾಪ್ರಧಾನ ಆ್ಯಕ್ಷನ್ ಸಿನಿಮಾಗಳಲ್ಲಿ ಕಾಣಿಸಿಕೊಳ್ಳಬೇಕು. ಪ್ರೇಕ್ಷಕರು ಹುಬ್ಬೇರಿಸುವಂಥ ಸ್ಟಂಟ್‌ಗಳನ್ನು ತೆರೆಯ ಮೇಲೆ ಮಾಡಿ ತೋರಿಸಬೇಕು ಎಂಬ ಮಹದಾಸೆಯೂ ಇದೆ.

ಸದ್ಯಕ್ಕೆ 'ಕಿರಿಕ್ ಶಂಕರ್' ಸಿನಿಮಾ ತೆರೆಗೆ ಬರುವುದನ್ನೇ ಕಾಯುತ್ತಿರುವ ಅದ್ವಿಕಾ ನಟಿಸಲಿರುವ ಮುಂದಿನ ಸಿನಿಮಾದ ಮಾತುಕತೆಯೂ ನಡೆಯುತ್ತಿದೆಯಂತೆ. ■



# ಬೆಳವಾಡಿ ಅವರಿಗೆ ಕಂಡ ಸತ್ಯದ ಬೆಳಕಿಂಡಿ

ಹಿರಿಯ ನಟ ಪ್ರಕಾಶ್ ಬೆಳವಾಡಿ ಅವರು ಕ್ಷಮೆ ಕೋರಿರುವ ವಿಡಿಯೊವೊಂದು ಸೋಷಿಯಲ್ ಮೀಡಿಯಾಗಳಲ್ಲಿ ಸಾಕಷ್ಟು ವೈರಲ್ ಆಗಿದೆ. ಕಣ್ಣ ಮುಂದೆ ಜ್ವಲಂತವಾಗಿ ಕಾಣುವ ತಪ್ಪುಗಳನ್ನೇ ಮಾಡಿಲ್ಲವೆಂದು ವಾದಿಸುವ, ಕ್ಷಮೆ ಕೇಳುವುದು ತಮ್ಮ ವರ್ಚಸ್ಸಿಗೆ ಧಕ್ಕೆ ಎಂದೇ ಅಂದುಕೊಂಡಿರುವವರೇ ಎಲ್ಲೆಡೆಯೂ ಕಾಣಿಸಿಕೊಳ್ಳುತ್ತಿರುವ ಕಾಲವಿದು. ಇಂಥ ಕಾಲದಲ್ಲಿ ಹಿರಿಯ ನಟನೊಬ್ಬ ಕ್ಷಮೆ ಕೋರಿದ್ದಾರೆಂದರೆ ಅದು ವೈರಲ್ ಆಗದೇ ಇರುತ್ತದೆಯೇ? ಕ್ಷಮೆ ಕೋರುವಾಗ ಅವರ ಕಣ್ಣುಗಳಲ್ಲಿ, ಮುಖದಲ್ಲಿ ಪಾಪದ ಪ್ರಜ್ಞೆ ಧಗಧಗ ಉರಿಯುತ್ತಿತ್ತು ಎಂಬುದು ಅವರ ಪರ 'ಶೇರ್'ದಾರರ ಅನಿಸಿಕೆ. ಅದು ಹಾಗಲ್ಲ, ಅವರ ಮುಖ ಇರುವುದೇ ಹಾಗೆ ಎಂದು ವಿತಂಡವಾದ ಮಾಡುವ ವಿಕಟರ ಸಂಖ್ಯೆಯೂ ಕಡಿಮೆಯೇನಿಲ್ಲ.

ಹೌದು, ಪ್ರಕಾಶ್ ಕ್ಷಮೆ ಕೋರಿದ್ದು ಯಾರನ್ನು? ಅದಕ್ಯಾಕೆ ಇಷ್ಟೊಂದು ಯೋಚನೆ ಮಾಡಬೇಕು ಎಂದು ಅಮಾಯಕವಾಗಿ, ಗದ್ದದ ಮೇಲೆ ಬೆರಳಿಟ್ಟುಕೊಳ್ಳುವವರಿಗಾದರೂ ಇದರ ಹಿಂದಿನ ವಿವರಗಳನ್ನು ಹೇಳಲೇಬೇಕಲ್ಲ. ಅವರು ಕ್ಷಮೆ ಕೋರಿದ್ದು ಒಬ್ಬ ವ್ಯಕ್ತಿಗಲ್ಲ, ಬದಲಿಗೆ ಒಂದು ಸಮುದಾಯಕ್ಕೆ. ಅದೂ ಇತ್ತೀಚೆಗೆ ದೇಶದಾದ್ಯಂತ ಭರ್ಜರಿ ಸುದ್ದಿಯಲ್ಲಿರುವ ಕಾಶ್ಮೀರಿ ಪಂಡಿತ ಸಮುದಾಯಕ್ಕೆ.

ವಿವೇಕ್ ಅಗ್ನಿಹೋತ್ರಿ ಅವರ ನಿರ್ದೇಶನದ 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾ ದೇಶದಾದ್ಯಂತ ನೂರಾರು ಚಿತ್ರಮಂದಿರಗಳಲ್ಲಿ ಅಗ್ನಿಯಂತೆ ಧಗಧಗಿಸುತ್ತಿದೆ. ಆ ಅಗ್ನಿಯ ಎದುರು ಕೂತು ಕೆಲವರು ರಕ್ತಕುದಿಸಿಕೊಂಡು ರಾಂಗಾಗಿದ್ದರೆ ಇನ್ನು ಕೆಲವರು ಮಂಡೆ ಸುಟ್ಟುಕೊಂಡು ಮಂಕಾಗಿದ್ದಾರೆ. ಈ ಕಿಡಿ ಕಾಡ್ಗಿಚ್ಚಾಗಿ ಹಬ್ಬಿಕೊಳ್ಳುವ ಹೊತ್ತಿನಲ್ಲಿಯೇ ಪ್ರಕಾಶ್, ಕಾಶ್ಮೀರಿ ಪಂಡಿತ ಸಮುದಾಯದ ಕ್ಷಮೆ ಕೋರಿದ್ದಾರೆ. ಅದಕ್ಕೆ ಕಾರಣವೂ ಸ್ಪಷ್ಟವಿದೆ.

'ನಿರ್ದೇಶಕರು ಸ್ಕ್ರಿಪ್ಟ್ ಕಳಿಸುವವರೆಗೂ ನನಗೆ ಕಾಶ್ಮೀರಿ ಪಂಡಿತರ ಮೇಲೆ ನಡೆದ ದೌರ್ಜನ್ಯದ ಬಗ್ಗೆ ತಿಳಿದಿರಲಿಲ್ಲ. 1990ರಲ್ಲಿ ಆ ಘಟನೆ ನಡೆಯುವ ಹೊತ್ತಿನಲ್ಲಿ ನಾನು ಅದರ ಬಗ್ಗೆ ಮೌನವಹಿಸುವ ಪತ್ರಕರ್ತರ ಗುಂಪಿನ ಭಾಗವಾಗಿದ್ದೆ. ಈಗ ಅದರ ವಿವರಗಳನ್ನು ಕೇಳಿ ಆಘಾತವಾಯಿತು. ಅವತ್ತು ನಾನು ಮೌನವಾಗಿದ್ದಕ್ಕೆ ಕಾಶ್ಮೀರಿ ಪಂಡಿತರ ಕ್ಷಮೆ ಕೋರುತ್ತೇನೆ' ಎನ್ನುವುದು ಅವರ ಮಾತಿನ ಒಟ್ಟಾರೆ ಸಾರ. ಅವರ ಪಶ್ಚಾತ್ತಾಪಕ್ಕೆ ಕಾರಣವಿದೆ. ಹಾಗೆಯೇ ಈ ಹಿಂದೆ ಅವರು ಕಾಶ್ಮೀರಿ ಪಂಡಿತರ ಬಗ್ಗೆ 'ಮೌನವಾಗಿ' ಇರುವ ಪತ್ರಕರ್ತರ ಗುಂಪಿನಲ್ಲಿ ಇದ್ದಿದ್ದಕ್ಕೂ ಕಾರಣವಿರಲೇಬೇಕು. ಹಾಗೆ ಅವರು ಅಲ್ಲಿಂದ ಜಿಗಿದು 'ಮಾತಾಡುವ' ಗುಂಪಿನ ಭಾಗವಾಗಿರಲೂ ಕಾರಣವಿಲ್ಲದೇ ಇದ್ದೀತೇ? ಅದೇನೇ ಇರಲಿ, ಹಳೆಯದನ್ನು ತೊಳೆಸಿದರೆ ಪರಿಮಳವೇನೂ ಬರದಲ್ಲಾ... ಈಗ ಅವರು ಕ್ಷಮೆ ಕೋರಿ ಹಗುರಾಗಲು ನಿರ್ಧರಿಸಿದ್ದು ಒಳ್ಳೆಯದೇ. ಅದಕ್ಕೆ 'ಕರೆಕ್ಟ್' ಆದ ಸಮಯ ಮತ್ತು ಸಂದರ್ಭವನ್ನೂ ಆರಿಸಿಕೊಂಡಿರುವುದು ಅವರ ವೃತ್ತಿಪರತೆಗೆ ಸಾಕ್ಷಿ. ಎಷ್ಟೆಂದರೂ ನಿರ್ದೇಶಕನ ಸಂಕಟ, ನಿರ್ಮಾಪಕರ ಸಂಕಷ್ಟಗಳನ್ನು ಹತ್ತಿರದಿಂದ ಬಲ್ಲವರು ಅವರು. ಸಿನಿಮಾ ಮಾಡಿದರಷ್ಟೇ ಸಾಲದು, ಅದನ್ನು ರಿಲೀಸ್ ಮಾಡುವ ಸಮಯವೂ ಅಷ್ಟೇ ಮುಖ್ಯ ಎನ್ನುವುದು ಅವರಿಗೆ ಚೆನ್ನಾಗಿಯೇ ಗೊತ್ತಿದೆ. ■